



# ಕಾವಿ ಕಲೆಗೆ ಹಾವಂಜೆ ನೆಲೆ

ಉಡುಪಿ ಸಮೀಪದ ಹಾವಂಜೆಯ ಜನಾರ್ದನ ರಾವ್, ಕಾವಿ ಕಲಾ ಪ್ರಕಾರದ ಸಂರಕ್ಷಣೆ ಹಾಗೂ ಪುನರುತ್ಥಾನದಲ್ಲಿ ತೊಡಗಿಕೊಂಡಿರುವ ವಿಶಿಷ್ಟ ಕಲಾವಿದ. ಬೆಂಗಳೂರಿನಲ್ಲೀಗ ಅವರ ಕಾವಿ ಕಲಾಕೃತಿಗಳ ಸಂಭ್ರಮ.

■ ವಿಶ್ವನಾಥ ಎ.ಎಸ್.

ಕಳೆದ ಕೆಲವು ಶತಮಾನಗಳಿಂದ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿರುವ ಸಾಂಸ್ಕೃತಿಕ ಪ್ರವಾಹದಲ್ಲಿ ದೇಶೀಯವಾದ ಬಹಳಷ್ಟು ಕಲಾಪ್ರಕಾರಗಳನ್ನು ಜನಪದ ಅಥವಾ ಸಾಂಪ್ರದಾಯಿಕ ಎಂಬ ಭೇದವಿಲ್ಲದೆ ಕಳೆದುಕೊಂಡಿದ್ದೇವೆ. ಆದಾಗ್ಯೂ ತಮ್ಮ ಶೈಲಿಯಲ್ಲಿರಬಹುದಾದ ಸರಳತೆ, ವಿಶಿಷ್ಟ ವಿನ್ಯಾಸ, ಆಕರ್ಷಕ ವರ್ಣ ಸಂಯೋಜನೆಗಳಿಂದ ವರ್ಲಿ, ಮಧುಬನಿ, ಕಲಂಕಾರಿಗಳಂತಹ ಕೆಲವು ಜನಪದ ಕಲಾಪ್ರಕಾರಗಳು ಹಾಗೂ ಮೈಸೂರು, ತಂಜಾವೂರು, ಸುರಪುರ ಶೈಲಿಯಂತಹ ಕೆಲವು ಸಾಂಪ್ರದಾಯಿಕ ಚಿತ್ರಶೈಲಿಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಪ್ರಾಯಶಃ ಇಂತಹ ಶೈಲಿಗಳು ಪ್ರಾದೇಶಿಕವಾಗಿ ಒಂದು ಭೂ ಭಾಗದೊಂದಿಗೆ ಗುರುತಿಸಿಕೊಂಡಿರುವುದೂ ಅವುಗಳ ಉಳಿವಿಗೆ ಕಾರಣವಿರಬಹುದು. ಹೀಗೆ ಉಳಿದು ಬಂದಿರುವ ಕಲೆಗಳಲ್ಲೊಂದು, ನಮ್ಮ ಕರಾವಳಿ ಭಾಗದಲ್ಲಿ ಕಂಡುಬರುವ 'ಕಾವಿ' ಭಿತ್ತಿಚಿತ್ರಕಲೆ.

ಏಕವರ್ಣದ ಕಾವಿ ಕಲೆಯು ತನ್ನ ರಚನಾಕ್ರಮ ಮತ್ತು ವಿನ್ಯಾಸಗಳಿಂದಾಗಿ ಸಾಂಪ್ರದಾಯಿಕ ಹಾಗೂ ಜನಪದೀಯ ಸಮ್ಮಿಶ್ರಣವುಳ್ಳ ಕಲಾ ಪ್ರಕಾರವೆನ್ನಬಹುದು. ಇಂತಹ ಕಲಾಪ್ರಕಾರಗಳ ಉಳಿವಿಗೆ ಸೂಕ್ತ ಅಧ್ಯಯನ ಮತ್ತು ನಿರಂತರ ಕಲಾರಚನೆಯಲ್ಲಿ ತೊಡಗಿರುವವರು ಅಗತ್ಯ. ಭಾರತೀಯ ವೈವಿಧ್ಯವನ್ನು ಸಾರುವ ಅಳಿವಿನಂಚಿನ ಈ ದೇಶೀಯ ಗೀರು ಕಲೆ ಕಾವಿ ಭಿತ್ತಿಚಿತ್ರಕಲೆಯ ವಿಷಯದಲ್ಲಿ ಇಂತಹ ಮಹತ್ಕಾರ್ಯದಲ್ಲಿ ತೊಡಗಿಕೊಂಡಿರುವವರು ಉಡುಪಿ ಸಮೀಪದ ಹಾವಂಜೆಯವರಾದ ಜನಾರ್ದನ ರಾವ್.